# ಯುವಸ್ಪಂದನ

## ನಮ್ಮ ಪ್ರಶ್ನೆಗಳಿಗೆ ನಿಮ್ಮ ಉತ್ತರ

(ಕಳೆದ ಸಂಚಿಕೆಯಿಂದ ಮುಂದುವರೆದುದು)


### ಶಿಕ್ಷಣಕ್ಕೂ ವ್ಯಕ್ತಿತ್ವನಿರ್ಮಾಣಕ್ಕೂ ಇರುವ ಸಂಬಂಧವೇನು?

ಪರಿಪೂರ್ಣತೆಯ ಅಭಿವ್ಯಕ್ತಿಗೆ ದಾರಿ ಮಾಡಿಕೊಡುವುದೇ ಶಿಕ್ಷಣದ ಮೂಲೋದ್ದೇಶ. ಚಿನ್ನದ ಅದಿರನ್ನು ಸಂಸ್ಕರಿಸಿ ಶುದ್ಧ ಚಿನ್ನವನ್ನು ಪಡೆಯುವಂತೆ, ವಿಧಿ-ವಿಧಾನಗಳೂ, ಕ್ರಿಯೆ-ಪ್ರಕ್ರಿಯೆಗಳೂ ಅಂತರಂಗ ಸಂಸ್ಕರಣಗೈದು, ವ್ಯಕ್ತಿಯ ಆಂತರ್ಯದಲ್ಲಿನ ಪಶುತ್ವವನ್ನು ನೀಗಿಸಿ, ದೈವತ್ವವನ್ನು ಪ್ರಚೋದಿಸಿ ಆ ದೇವರ ಶಕ್ತಿ ಅಥವಾ ಆತ್ಮಶಕ್ತಿ ಹೊಮ್ಮುವಂತೆ ಮಾಡುತ್ತವೆ. ಅವರಿಂದಾಗಿ ವ್ಯಕ್ತಿಯ ಚಾರಿತ್ರ್ಯ ಸಂವರ್ಧಿಸುತ್ತದೆ, ಪ್ರತಿಭೆ ಅರಳುತ್ತವೆ, ಕೌಶಲ್ಯ ವೃದ್ಧಿಸುತ್ತದೆ, ಆತ್ಮವಿಶ್ವಾಸ ಕುದುರುತ್ತದೆ, ಮಹತ್ತನ್ನು ಸಾಧಿಸಬೇಕೆಂಬ ಕೆಚ್ಚು ಉಕ್ಕುತ್ತದೆ. ತನ್ನ ಕಾಲ ಮೇಲೆ ತಾನು ನಿಂತು ಇನ್ನೊಬ್ಬರಿಗೆ ಒಳಿತನ್ನುಂಟುಮಾಡಬೇಕೆಂಬ ತುಡಿತ ಮಿಡಿಯುತ್ತದೆ. ಹೀಗೆ ವ್ಯಕ್ತಿಯ ಸರ್ವಾಂಗೀಣ ಪ್ರಗತಿಕಾರಕವಾಗಿ; ದೈಹಿಕ, ಬೌದ್ಧಿಕ, ನೈತಿಕ, ಆಧ್ಯಾತ್ಮಿಕ ವಿಕಾಸಕ್ಕೆಡೆಮಾಡಿ ಆತನು ನಲಿವು, ಗೆಲವು, ಚೆಲವುಗಳಿಂದ ಚೆನ್ನಾಗಿ ಬದುಕುವಂತೆ ಮಾಡುವುದೇ ಶಿಕ್ಷಣ. ಇಂಥ ಯೋಗ್ಯ ವ್ಯಕ್ತಿನಿರ್ಮಾಣವೇ ಶಿಕ್ಷಣದ ಧ್ಯೇಯೋದ್ದೇಶ.

—ರೂಪಾ. ಎಂ.ಬಿ., ಮೂರನೇ ಸೆಮಿಸ್ಟರ್, ಬಿ.ಬಿ.ಎಂ.
ಎಂ.ಎಂ.ಕೆ. ಮತ್ತು ಎಸ್.ಡಿ.ಎಂ. ಕಾಲೇಜು, ಮೈಸೂರು.

ಶಿಕ್ಷಣ ಮತ್ತು ವ್ಯಕ್ತಿತ್ವನಿರ್ಮಾಣ ಎರಡೂ ವಿಷಯಗಳಿಗಿರುವ ಸಂಬಂಧವನ್ನು ಒಂದು ಸಸ್ಯದ ಬೇರು ಹಾಗೂ ಕಾಂಡ ರೆಂಬೆ ಕೊಂಬೆಗಳಿಗಿರುವ ಸಂಬಂಧಕ್ಕೆ ಹೋಲಿಸಬಹುದಾಗಿದೆ. ಹೇಗೆ ಮೇಲ್ಭಾಗದಲ್ಲಿ ಮಾತ್ರ ಆರೋಗ್ಯವಂತ ಮರದಂತೆ ಕಾಣುವ ಮರದ ಬೇರಿಗೆ ಗೆದ್ದಲು ಹತ್ತಿದರೆ ಸುಳಿಗಾಳಿಗೆ ಕುಸಿದು ಬೀಳುವುದೋ ಹಾಗೆಯೇ ಮೌಲ್ಯರಹಿತ ಶಿಕ್ಷಣದ ಮೇಲೆ ರೂಪುಗೊಂಡ ವ್ಯಕ್ತಿತ್ವ ನಾಶವಾಗುತ್ತದೆ. ಮೌಲ್ಯವನ್ನೊಳಗೊಂಡ, ನೀತಿಯನ್ನೊಳಗೊಂಡ ಶಿಕ್ಷಣ ಪಡೆದು ನಿರ್ಮಾಣವಾದ ವ್ಯಕ್ತಿತ್ವ ನಳನಳಿಸುವ ವೃಕ್ಷದಂತಿರುತ್ತದೆ. ವಿಧೇಯತೆ, ವಿವೇಕ, ಧೈರ್ಯ, ಸಮಯಪ್ರಜ್ಞೆ, ನಂಬಿಕೆ, ಮನಶ್ಶಾಂತಿ, ಅನುಕಂಪ ಈ ಮೌಲ್ಯಗಳನ್ನೆಲ್ಲಾ ಒಳಗೊಂಡ ಶಿಕ್ಷಣ ಪಡೆದು ನಿರ್ಮಾಣಗೊಂಡ ವ್ಯಕ್ತಿಯ ವ್ಯಕ್ತಿತ್ವ ಪೂಜ್ಯತೆಗೆ ಅರ್ಹವಾಗಬಲ್ಲುದು. ಆದ್ದರಿಂದ ಮೌಲ್ಯವೆಂಬುದು ಶಿಕ್ಷಣವೆಂಬಲ್ಲಿ ಮುಖ್ಯವಾಗಿ ಬೇಕಾಗುತ್ತದೆ.

—ಸಿರಿದೇವಿ ಹೆಚ್. ಎಸ್., ಅಂತಿಮ ಬಿ.ಎಸ್ಸಿ.,
ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.



# ಯುವವೇದಿಕೆ

ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ಶಿಕ್ಷಣವೆಂದರೆ ಮನುಷ್ಯನಲ್ಲಿ ಮೊದಲೇ ಇರುವ ಪರಿಪೂರ್ಣತೆಯನ್ನು ಪ್ರಕಾಶಪಡಿಸುವುದು. ಇದು ಹೇಗೆ ಎಂದು ತಿಳಿಯಲು ಒಂದು ಉದಾಹರಣೆಯನ್ನು ನೋಡೋಣ. ಒಂದು ಬಂಡೆಕಲ್ಲನ್ನು ಶಿಲ್ಪಿ ಹದವಾಗಿ ಕತ್ತರಿಸಿ, ಹಲವಾರು ಪೆಟ್ಟು ನೀಡಿ, ಉಜ್ಜಿ ತೀಡಿ ಕಡೆಗೆ ಸುಂದರ ಮೂರ್ತಿಯನ್ನಾಗಿಸುತ್ತಾನೆ. ಆಗ ಅದೇ ಕಲ್ಲುಬಂಡೆ ನಮಗೆ ದೇವರಂತೆ ಕಾಣುತ್ತದೆ. ಈ ದೈವತ್ವ ಬಂಡೆಗೆ ಬೇರೆಲ್ಲಿಂದಲೋ ಬರಲಿಲ್ಲ. ಕಲ್ಲಿನಲ್ಲೇ ಇತ್ತು. ಆದರೆ ಪ್ರಕಾಶನಗೊಂಡಿದ್ದು ಶಿಲ್ಪಿಯ ಕೆತ್ತನೆಯಿಂದ. ಹಾಗೆಯೆ ಪ್ರಪಂಚದ ಎಲ್ಲ ವ್ಯಕ್ತಿಗಳಲ್ಲೂ ಒಂದು ಪರಿಪೂರ್ಣ ವ್ಯಕ್ತಿತ್ವ ಅಡಗಿದೆ. ಆದರೆ ಕಲ್ಲುಬಂಡೆಯೊಳಗಿರುವ ಮೂರ್ತಿಯಂತೆ ಅದು ಕಾಣುತ್ತಿಲ್ಲ. ಶಿಕ್ಷಣವೆಂಬ ಶಿಲ್ಪಿ ವ್ಯಕ್ತಿಯೊಳಗೆ ಹುದುಗಿರುವ ವ್ಯಕ್ತಿತ್ವವನ್ನು ಜಾಗೃತಗೊಳಿಸುತ್ತದೆ. ಆಗ ನಮಗೆ ಕಲ್ಲಿನಲ್ಲಿ ದೇವರು ಕಂಡಂತೆ, ವ್ಯಕ್ತಿಯಲ್ಲಿ ಪರಿಪೂರ್ಣ ವ್ಯಕ್ತಿತ್ವ ಕಂಡುಬರುತ್ತದೆ.

> ಒಂದು ಅಮೃತಶಿಲೆಗೆ ಶಿಲ್ಪಿ ಇರುವಂತೆಯೇ ಮಾನವ ಜೀವಿಗೆ ಶಿಕ್ಷಣ. ಒಬ್ಬ ಸಾಮಾನ್ಯ ವ್ಯಕ್ತಿಯಲ್ಲಿ ದಾರ್ಶನಿಕನೊ ಸಂತನೊ ವೀರನೊ ವಿವೇಕಿಯೊ ಗುಪ್ತವಾಗಿ ಅಡಗಿರಬಹುದು. ಯೋಗ್ಯ ಶಿಕ್ಷಣವು ಆಂತರಿಕ ಶ್ರೇಷ್ಠತೆಯನ್ನು ಹೊರಪಡಿಸಿ ಪ್ರಕಾಶಗೊಳ್ಳುವಂತೆ ಮಾಡುತ್ತದೆ.
>
> —ಎಡಿಸನ್

ಈ ವ್ಯಕ್ತಿತ್ವ ನಿರ್ಮಾಣದ ಶಿಕ್ಷಣ, ಶಾಲಾ ಕಾಲೇಜಿನದೇ ಆಗಬೇಕಾಗಿಲ್ಲ. ಪ್ರಾಯಶಃ ಇಂದಿನ ಕಾಲೇಜು ಶಿಕ್ಷಣ ಈ ವ್ಯಕ್ತಿತ್ವ ನಿರ್ಮಾಣ ಕಾರ್ಯದಲ್ಲಿ ವಿಫಲವಾಗಿದೆ. ವ್ಯಕ್ತಿಯು ಬಾಲ್ಯದಲ್ಲಿ ತಾಯಿ, ತಂದೆಯರಿಂದ ಸ್ನೇಹಿತರಿಂದ ಒಳ್ಳೆಯ, ಕೆಟ್ಟ ಘಟನೆಗಳಿಂದ ಶಾಸ್ತ್ರಾಧ್ಯಯನದಿಂದ ಮಹಾತ್ಮರ ಜೀವನದಿಂದ ಗುರುಗಳಿಂದ ಹೀಗೆ ಹತ್ತಾರು ಕಡೆಯಿಂದ ಶಿಕ್ಷಣ ಪಡೆಯುತ್ತಾನೆ.

ಒಟ್ಟಿನಲ್ಲಿ ವ್ಯಕ್ತಿತ್ವ ನಿರ್ಮಾಣಕ್ಕೂ, ಶಿಕ್ಷಣಕ್ಕೂ ಇರುವ ಸಂಬಂಧ ಶಿಲ್ಪಕ್ಕೂ, ಶಿಲ್ಪಿಗೂ ಇರುವ ಸಂಬಂಧವೇ. ಶಿಕ್ಷಣದ ಕೆಲಸವೇ ವ್ಯಕ್ತಿತ್ವ ನಿರ್ಮಾಣ. ಹಾಗೆಯೇ ವ್ಯಕ್ತಿತ್ವ ನಿರ್ಮಾಣ ನೈಜ ಶಿಕ್ಷಣದಿಂದ ಮಾತ್ರ ಸಾಧ್ಯ.

—ವಿಶ್ವನಾಥ. ಎ.,
ಪ್ರಥಮ ವರ್ಷದ ಕಾನೂನು ವಿದ್ಯಾರ್ಥಿ, ಮೈಸೂರು.

ಕ್ಲಾಸ್‌ರೂಮಿನ ಯಾಂತ್ರಿಕ ಬೋಧನೆಗೂ ವ್ಯಕ್ತಿತ್ವಕ್ಕೂ ಯಾವುದೇ ವಿಧವಾದ ಸಂಬಂಧವಿಲ್ಲ. ನಾಲ್ಕುಗೋಡೆಗಳ ಮಧ್ಯೆ ನಡೆಯುವ ಇಂತಹ ಬೋಧನೆಯಿಂದ ಓದು ಬರಹ ಬರಬಹುದು. ಆದರೆ ವ್ಯಕ್ತಿತ್ವವನ್ನು ಒರ್ವ ವ್ಯಕ್ತಿ ಸ್ವತಃ ತಾನೇ ರೂಪಿಸಿಕೊಳ್ಳಬೇಕು. ಗಾಂಧೀಜಿಯವರು ಪಡೆದ ವಕೀಲಿ ಪದವಿಗೂ ಅವರ ವ್ಯಕ್ತಿತ್ವಕ್ಕೂ ಯಾವುದೇ ಸಂಬಂಧವಿರಲಿಲ್ಲ.

> ಶಾಲೆ ಕಾಲೇಜುಗಳಲ್ಲಿ ಕಲಿಸಿದ ವಿಷಯಗಳು ಶಿಕ್ಷಣವಲ್ಲ. ಅವು ಶಿಕ್ಷಣ ಸಾಧನಗಳು ಅಷ್ಟೆ.
>
> —ಎಮರ್ಸನ್

ಅವರ ವ್ಯಕ್ತಿತ್ವದಿಂದ ಅವರು ವಕೀಲಿವೃತ್ತಿಯಲ್ಲಿ ಸತ್ಯನಿಷ್ಠರಾಗಿರಲು ಸಹಾಯ ಮಾಡಿರಬಹುದು. ಆದರೆ ಅವರ ಅಸಾಧಾರಣವಾದ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳುವಲ್ಲಿ ಅವರ ಸ್ವಂತ ಪರಿಶ್ರಮವಿತ್ತು. ಶ್ರೀರಾಮಕೃಷ್ಣ ಪರಮಹಂಸರು ತಮ್ಮ ವ್ಯಕ್ತಿತ್ವವನ್ನು ತಾವೇ ರೂಪಿಸಿಕೊಂಡು ಕಾಳಿಕಾದೇವಿಗೆ ಪ್ರೀತಿಪಾತ್ರರಾದರು. ಈಗಿನ ಕಾಲದಲ್ಲಿ ಒಬ್ಬನ ವ್ಯಕ್ತಿತ್ವವನ್ನು ಬೆಳೆಸಲು ಸಾಮಾನ್ಯವಾಗಿ ಶಿಕ್ಷಕರಾಗಲಿ ಅಥವಾ ತಂದೆ ತಾಯಿಗಳಾಗಲೀ ಸಹಾಯ ಮಾಡುವುದು ಬಹು ಅಪರೂಪ. —**ಉಷಾರಾಣಿ. ಆರ್., ದ್ವಿತೀಯ ಎಲ್.ಎಲ್.ಬಿ., ವಿದ್ಯಾವರ್ಧಕ ಕಾನೂನು ಕಾಲೇಜು, ಮೈಸೂರು**

**ಶಿಕ್ಷಣಕ್ಕೂ**, ವ್ಯಕ್ತಿತ್ವನಿರ್ಮಾಣಕ್ಕೂ ಬಿಡಿಸಲಾಗದ ಸಂಬಂಧವಿದೆ. ದೇಹ-ಪ್ರಾಣ, ಹೂವು-ಗಂಧ ಮುಂತಾದವು ಯಾವಾಗಲೂ ಜೊತೆಯಲ್ಲೇ ಇರುವಂತೆ ಶಿಕ್ಷಣ ಹಾಗೂ ವ್ಯಕ್ತಿತ್ವ ನಿರ್ಮಾಣ ಇವೆರಡೂ ಜೊತೆಯಲ್ಲಿ ಇರುವ ಅಂಶಗಳು. ಶಿಕ್ಷಣದ ಮೂಲಕ ಎಂತಹ ಮೂಢನನ್ನೂ ಪಂಡಿತನನ್ನಾಗಿ ಮಾಡಬಹುದು, ದುಷ್ಟನನ್ನೂ ಶಿಷ್ಟನನ್ನಾಗಿ ಮಾಡಬಹುದು. ಒಬ್ಬ ವ್ಯಕ್ತಿಯಲ್ಲಿ ತಾನು ಯಾರು, ತಾನು ಏನೇನು ಆಗಬಹುದು, ಏನೇನು ಸಾಧಿಸಬಹುದು ಎಂಬುದರ ಅರಿವು ಮೂಡಬೇಕು. ವ್ಯಕ್ತಿತ್ವ ವಿಕಸನವೆಂಬುದು ಒಂದು ಸಮಗ್ರ ಪರಿಕಲ್ಪನೆ. ಕೇವಲ ದೇಹಬಲವರ್ಧನೆಯಿಂದ ವ್ಯಕ್ತಿತ್ವ ವಿಕಸನ ಆಗುವುದಿಲ್ಲ.

ಮಹಾದಡ್ಡನಾಗಿದ್ದ ಕುರಿಕಾಯುವವ ಮುಂದೆ ಕಾಳಿಕಾದೇವಿಯ ವರಪ್ರಸಾದದಿಂದ ಮಹಾಕವಿ ಕಾಳಿದಾಸನಾದ. ಅಂಗುಲಿಮಾಲನಂಥ ರಾಕ್ಷಸ, ಆಮ್ರಪಾಲಿಯಂಥ ವೇಶ್ಯೆಯೂ ಕೂಡ ಭಗವಾನ್ ಬುದ್ಧನ ವ್ಯಕ್ತಿತ್ವದ ಪ್ರಭಾವದಿಂದ ಸತ್ಪ್ರಜೆಗಳಾಗಿ ಮಾರ್ಪಾಡು ಆಗಿರುವುದನ್ನು ಇಲ್ಲಿ ಸ್ಮರಿಸಬಹುದು. ಉತ್ತಮ ಶಿಕ್ಷಣ ಹಾಗೂ ಮಾರ್ಗದರ್ಶನ ಮಾತ್ರ ವ್ಯಕ್ತಿತ್ವವನ್ನು ವಿಕಸನಗೊಳಿಸಲು ಸಾಧ್ಯ, ಇನ್ನಾವುದರಿಂದಲೂ ಸಾಧ್ಯವಿಲ್ಲ ಎಂಬುದನ್ನು ಇಂತಹ ಉದಾಹರಣೆಗಳಿಂದ ತಿಳಿದುಕೊಳ್ಳಬಹುದು.—**ಮಂಜುನಾಥ. ಕೆ., ದ್ವಿತೀಯ ಬಿ.ಫಾರ್ಮ್, ಜೆ.ಎಸ್.ಎಸ್ ಫಾರ್ಮಸಿ ಕಾಲೇಜು, ಮೈಸೂರು.**

**ಶಿಕ್ಷಣಕ್ಕೂ** ವ್ಯಕ್ತಿತ್ವ ನಿರ್ಮಾಣಕ್ಕೂ ನೇರವಾದ ಸಂಬಂಧವಿದೆ. ಇದು ನಾವು ಭಾರತದ ಇತಿಹಾಸವನ್ನು ಒಮ್ಮೆ ತಿರುವಿಹಾಕಿದಾಗ ಚೆನ್ನಾಗಿ ಮನದಟ್ಟಾಗುತ್ತದೆ. ಮಹಾತ್ಮಾ ಗಾಂಧಿಯವರಿಗೆ ಅವರ ತಾಯಿ ಪುತಲೀಬಾಯಿ ಕೊಟ್ಟ ಸತ್ಯ, ಧರ್ಮ, ತ್ಯಾಗದ ಶಿಕ್ಷಣ ಮುಂದೆ ಅವರನ್ನು ಭಾರತದ ಮಹಾನ್ ವ್ಯಕ್ತಿಯನ್ನಾಗಿ ಮಾಡಿತು. ಮರಾಠ ಸಾಮ್ರಾಜ್ಯದ ಸ್ಥಾಪಕ ಶಿವಾಜಿಗೆ ತಾಯಿ ಜೀಜಾಬಾಯಿ ಕೊಟ್ಟ ಧೈರ್ಯ, ಸಾಹಸದ ಶಿಕ್ಷಣ ಮುಂದೆ ಮರಾಠ ಸಾಮ್ರಾಜ್ಯದ ಸ್ಥಾಪನೆಗೆ ದಾರಿದೀಪವಾಯಿತು.

ಯಾವರೀತಿ ಒಳ್ಳೆಯ ಶಿಕ್ಷಣ ಒಳ್ಳೆಯ ವ್ಯಕ್ತಿತ್ವ ನಿರ್ಮಾಣ ಮಾಡುತ್ತದೊ, ಹಾಗೆಯೇ ಕೆಟ್ಟ ಶಿಕ್ಷಣ ಕೆಟ್ಟ ವ್ಯಕ್ತಿತ್ವ ನಿರ್ಮಾಣ ಮಾಡುತ್ತದೆ. ಈ ವಿಷಯ ಋಷಿಯ ಸಾನ್ನಿಧ್ಯದಲ್ಲಿ ಬೆಳೆದ ಗಿಳಿ ಮತ್ತು ಕಟುಕನ ಪೋಷಣೆಯಲ್ಲಿ ಬೆಳೆದ ಗಿಳಿಯ ಕಥೆಯಿಂದ ನಮಗೆ ಚೆನ್ನಾಗಿ ಮನದಟ್ಟಾಗುತ್ತದೆ. ಒಳ್ಳೆಯ ಶಿಕ್ಷಣ ಸಮಾಜಕ್ಕೆ ಒಳ್ಳೆಯ ವ್ಯಕ್ತಿಗಳನ್ನು ಕೊಡುಗೆಯಾಗಿ ಕೊಡುತ್ತದೆ. 'ಬೆಳೆಯುವ ಸಸಿ ಮೊಳಕೆಯಲ್ಲಿ.' ಮಗು ಹುಟ್ಟಿದಾಗಲೇ ಒಳ್ಳೆಯ ಶಿಕ್ಷಣ ಕೊಡುವುದರ ಮೂಲಕ ಒಳ್ಳೆಯ ಸುಕೃತ ಜನಾಂಗಕ್ಕೆ ಅಡಿಪಾಯ ಹಾಕಬಹುದು.

> ಬೋಧನೆ ಶಾಲೆಯಲ್ಲಿಯೇ ಕೊನೆಗೊಳ್ಳುತ್ತದೆ. ಆದರೆ ಶಿಕ್ಷಣ ಜೀವನದೊಂದಿಗೆ ಕೊನೆಗೊಳ್ಳುತ್ತದೆ. ಮಗುವು ಶಿಕ್ಷಣವನ್ನು ಪಡೆಯುವುದಕ್ಕಾಗಿ ಪ್ರಪಂಚಕ್ಕೆ ಬರುತ್ತದೆ.
>
> —ಎಫ್. ಡಬ್ಲ್ಯು. ರಾಬರ್ಟ್‌ಸನ್

ಶಿಕ್ಷಣ ನಿಂತ ನೀರಾಗದೆ ಹರಿಯುವ ಶುಭ್ರ ಜಲವಾಗಿರಬೇಕು. ಕಾಲಕ್ಕೆ ತಕ್ಕಂತೆ ಶಿಕ್ಷಣದಲ್ಲಿ ಬದಲಾವಣೆ ಆಗಿ, ಕಾಲಕ್ಕೆ ತಕ್ಕಂತೆ ವ್ಯಕ್ತಿಗಳ ನಿರ್ಮಾಣ ಮಾಡುವ ಹೊಣೆ ಶಿಕ್ಷಣದ್ದು. ಶಿಕ್ಷಣ ಮನುಷ್ಯನ ವ್ಯಕ್ತಿತ್ವದ ಮೇಲೆ ಪ್ರಭಾವ ಬೀರಿ ಅವನ ವ್ಯಕ್ತಿತ್ವವನ್ನು ದೃಢಗೊಳಿಸುತ್ತದೆ. ಶಿಕ್ಷಣ ಕೇವಲ ನಾಗರಿಕತೆಯ ಸೊಗಡನ್ನು ಹೊದಿಸಿಕೊಂಡವರಂತೆ ಮೆರೆಯುವ, ಮಾನವೀಯತೆಯನ್ನು ಮರೆತಿರುವ ವ್ಯಕ್ತಿಗಳ ವ್ಯಕ್ತಿತ್ವದ ರಚನೆ ಅಲ್ಲ, ಸಮಾಜದಲ್ಲಿ ಎಲ್ಲರನ್ನೂ ಸಮ ಎಂದು ಭಾವಿಸುವ, ಎಲ್ಲರೊಂದಿಗೂ, ಮಾನವೀಯತೆಯಿಂದ ನಡೆದುಕೊಳ್ಳುವ ವ್ಯಕ್ತಿತ್ವದ ರಚನೆ ಆಗಿದೆ. —**ಭಾಗ್ಯಲಕ್ಷ್ಮಿ. ಎಚ್., ಅಂತಿಮ ಬಿ.ಎಸ್ಸಿ (ಪಿ.ಎಂ.ಸಿ), ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.**

**ವ್ಯಕ್ತಿತ್ವ** ನಿರ್ಮಾಣದ ಮಾರ್ಗದಲ್ಲಿ ಶಿಕ್ಷಣವು ದಾರಿದೀಪವಿದ್ದಂತೆ. ಶಿಕ್ಷಣಕ್ಕೋಸ್ಕರ ಎಲ್ಲಾ ರೀತಿಯ ವಿದ್ಯಾರ್ಥಿಗಳು ಒಂದು ಕಡೆ ಸೇರುವರು. ಇದರಿಂದ ವಿಚಾರ ವಿನಿಮಯವಾಗುತ್ತದೆ. ಸ್ನೇಹ, ಸೌಹಾರ್ದತೆ ಬೆಳೆಯುತ್ತದೆ. ವ್ಯಕ್ತಿಯ ವಿಚಾರಶಕ್ತಿ, ಸಹನೆ, ಕೋಮಲತೆ, ಜ್ಞಾನ ಸಂಪಾದನೆಯ ಉತ್ಸುಕತೆ ಇವು ಶಿಕ್ಷಣಮಟ್ಟವನ್ನು ಅವಲಂಬಿತವಾಗಿರುತ್ತವೆ. ಶಿಕ್ಷಣದಿಂದ ನಾವು ಸ್ವಾವಲಂಬಿಗಳಾಗಬಹುದು. ಇದರಿಂದ ದೇಶಕ್ಕೆ, ತಂದೆತಾಯಿಯರಿಗೆ ಹೊರೆಯಾಗದೆ ನಮ್ಮ ಕಾಲ ಮೇಲೆ ನಾವು ನಿಲ್ಲಬಹುದು. ಶಿಕ್ಷಣವು ಮನುಷ್ಯನಲ್ಲಿ ವಿಚಾರಕ್ರಾಂತಿಯನ್ನು ಮೂಡಿಸುತ್ತದೆ. ಶಿಕ್ಷಣವು

ನಮ್ಮ ಬುದ್ಧಿಶಕ್ತಿಯನ್ನು ಸರಿಯಾಗಿ ಉಪಯೋಗಿಸುವುದರಲ್ಲಿ, ಮುಂದಾಲೋಚನೆ ಮಾಡುವುದರಲ್ಲಿ ಸಹಾಯವಾಗುತ್ತದೆ. ಯಾವ ರೀತಿ ಮನೆಯ ಆಯುಸ್ಸು ಅದರ ಅಡಿಪಾಯವನ್ನು ಅವಲಂಬಿಸಿರುತ್ತದೆಯೊ ಹಾಗೆ ಶಿಕ್ಷಣ ವ್ಯಕ್ತಿತ್ವ ನಿರ್ಮಾಣಕ್ಕೆ ಅಡಿಪಾಯವಿದ್ದಂತೆ.

**—ರಶ್ಮಿ.ಎಸ್., ತೃತೀಯ ಬಿ.ಎಸ್ಸಿ.,**
**ಮಹಾರಾಣಿ ಮಹಿಳಾ ಕಾಲೇಜು, ಮೈಸೂರು.**

ಶಿಕ್ಷಣಕ್ಕೂ ಮತ್ತು ವ್ಯಕ್ತಿತ್ವ ನಿರ್ಮಾಣಕ್ಕೂ ಇರುವ ಸಂಬಂಧ ಒಬ್ಬ ತಾಯಿ ಮತ್ತು ಆಕೆಯ ಮಗುವಿಗೆ ಇರುವ ಸಂಬಂಧದಂತೆ. ಶಿಕ್ಷಣ ಒಬ್ಬ ವ್ಯಕ್ತಿಯ ಜೀವನವನ್ನು ಬಹುಪಾಲು ನಿರ್ಧರಿಸುತ್ತದೆ. ಓರ್ವ ವ್ಯಕ್ತಿ ತನ್ನ ಯುವಾವಸ್ಥೆಯಲ್ಲಿ ಶಿಕ್ಷಣವನ್ನು ಪಡೆಯುತ್ತಾನೆ. ಈ ಸಮಯದಲ್ಲಿ ಬಿತ್ತಿದ ಬೀಜಗಳೇ ಮುಂದೆ ಹೆಮ್ಮರವಾಗುವುದು. ಅರಳಿಗಿಡವನ್ನು ನೆಟ್ಟರೆ, ಅದು ಬೆಳೆದು, ನೆರಳನ್ನೂ ಪ್ರಾಣಿ ಪಕ್ಷಿಗಳಿಗೆ ಆಶ್ರಯವನ್ನೂ ಒದಗಿಸುತ್ತದೆ. ಅಥವಾ ಈಚಲ ಗಿಡವನ್ನು ನೆಟ್ಟರೆ ಅದು ಈಚಲಮರವಾಗಿ ಬೆಳೆಯುತ್ತದೆ. ಅದರಿಂದ ತಯಾರಾಗುವ ಹೆಂಡದಿಂದ ಅದು ಕಂಟಕಪ್ರಾಯವಾಗುತ್ತದೆ. ಆದ್ದರಿಂದ ನಮ್ಮ ಶಿಕ್ಷಣ ಯುವ ಮನಸ್ಸಿನಲ್ಲಿ ಅರಳಿಮರವನ್ನು ನೆಡಬೇಕು. ಆಗ ಆ ವ್ಯಕ್ತಿಯ ವ್ಯಕ್ತಿತ್ವವು ಅರಳಿಮರದಂತೆ ಎತ್ತರವಾಗಿ, ವಿಶಾಲವಾಗಿ ಬೆಳೆದು ಇತರರಿಗೆ ನೆರಳನ್ನು, ತಂಪನ್ನು ನೀಡುತ್ತದೆ.

**—ಅಜಯ್. ಬಿ., L-155 ಎರಡನೇ ಹಂತ,**
**ಕುವೆಂಪು ನಗರ, ಮೈಸೂರು-23**

**ಶಿಕ್ಷಣ** ಒಬ್ಬ ವ್ಯಕ್ತಿಯ ವ್ಯಕ್ತಿತ್ವದ ಮೇಲೆ ನೇರ ಪರಿಣಾಮವನ್ನು ಬೀರುತ್ತದೆ. ಒಬ್ಬ ವ್ಯಕ್ತಿ ಸುಸಂಸ್ಕೃತನಾಗಲು ಸರಿಯಾದ ಶಿಕ್ಷಣ ಅತ್ಯಗತ್ಯ. ಶಿಕ್ಷಣ ವ್ಯಕ್ತಿತ್ವಕ್ಕೆ ಹೊಸ ಸಂಸ್ಕಾರದ ಲೇಪನ ಮಾಡುತ್ತದೆ. ಒಬ್ಬ ನಿರಕ್ಷರನೂ ಸಹ ಉತ್ತಮ ಸಂಸ್ಕಾರವನ್ನು ಪಡೆಯಬಹುದು. ಆದರೆ ಅದು ಬಹಳ ವಿರಳ. ಶಿಕ್ಷಣ ವ್ಯಕ್ತಿಗೆ ಭೂತ ಭವಿಷ್ಯತ್ತುಗಳ ಬಗ್ಗೆ ತಿಳಿಸುತ್ತದೆ. ತನ್ನ ಸುತ್ತಲಿನ ಪ್ರಪಂಚದ ಆಗುಹೋಗುಗಳ ಬಗ್ಗೆ ಚಿಂತನೆಗೆ ಹಚ್ಚುತ್ತದೆ. ಶಿಕ್ಷಣ ವ್ಯಕ್ತಿಯ ಜ್ಞಾನಮಟ್ಟವನ್ನು ಉತ್ತಮಗೊಳಿಸುತ್ತದೆ. ಸರ್ವತೋಮುಖ ಬೆಳವಣಿಗೆಗೆ ಸಹಕಾರಿಯಾಗಿ ತನ್ಮೂಲಕ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗುತ್ತದೆ. ತುಂಬಾ ಸರಳವಾಗಿ ಹೇಳಬೇಕೆಂದರೆ, ಉತ್ತಮ ವ್ಯಕ್ತಿತ್ವವನ್ನು ನಿರ್ಮಿಸಿಕೊಳ್ಳಲು ತವಕಿಸುತ್ತಿರುವ ಒಬ್ಬ ಯುವಕ, ತನ್ನ ವ್ಯಕ್ತಿತ್ವದ ವಿಕಸನಕ್ಕೆ ಹಲವಾರು ಮಹನೀಯರುಗಳ, ಬುದ್ಧಿಜೀವಿಗಳ ಲೇಖನಗಳನ್ನೂ, ಪುಸ್ತಕಗಳನ್ನೂ ಓದಬೇಕಾಗುತ್ತದೆ. ಶಿಕ್ಷಣ ಇಲ್ಲದೆ ಅವನಿಗದು ಅಸಾಧ್ಯ. ನಾವು ಇನ್ನೊಂದು ಅಂಶವನ್ನು ಗಮನಿಸಬೇಕು. ಸಾಮಾನ್ಯವಾಗಿ ಉತ್ತಮ ವ್ಯಕ್ತಿಗಳು ಎನಿಸಿಕೊಂಡ ಎಲ್ಲಾ ಮಹನೀಯರುಗಳು ಬಹುಪಾಲು ಶಿಕ್ಷಿತರೆ. ಮಿಕ್ಕೆಲ್ಲವನ್ನು ಬಿಟ್ಟು ಕಡೆಯ ಅಂಶವನ್ನು ಗಮನಿಸಿದರೆ ಸಾಕು, ಶಿಕ್ಷಣಕ್ಕೂ ವ್ಯಕ್ತಿತ್ವ ನಿರ್ಮಾಣಕ್ಕೂ ಇರುವ ಸಂಬಂಧವನ್ನು ನಾವು ಅರಿತುಕೊಳ್ಳಬಹುದು.

**—ಆರ್. ಬಸವರಾಜು., ಪ್ರಥಮ ಬಿ.ಎಸ್ಸಿ.,**
**ಜೆ.ಎಸ್.ಎಸ್. ಕಾಲೇಜು, ಮೈಸೂರು.**

**ಶಿಕ್ಷಣವು** ಮಾನವನ ವ್ಯಕ್ತಿತ್ವವನ್ನು ನಿರ್ಮಾಣ ಮಾಡುವ ಒಂದು ಪ್ರಮುಖ ಸಾಧನವಾಗಿದೆ. ಶಿಕ್ಷಣವು ವ್ಯಕ್ತಿತ್ವ ನಿರ್ಮಾಣದ ಜೊತೆಗೆ ನಮ್ಮ ಜ್ಞಾನವನ್ನು ಹೆಚ್ಚಿಸುವ ಪ್ರಯತ್ನ ಮಾಡುತ್ತದೆ. ಆದರೆ ಇಂದಿನ ಶಿಕ್ಷಣ ವ್ಯವಸ್ಥೆಯು ವ್ಯಕ್ತಿತ್ವವನ್ನು ನಿರ್ಮಾಣ ಮಾಡುವ ಬದಲಿಗೆ ವಿದ್ಯಾರ್ಥಿಗಳಲ್ಲಿ ಕೆಟ್ಟ ಹವ್ಯಾಸಗಳನ್ನು ಬೆಳೆಸುವಲ್ಲಿ ಪ್ರೇರೇಪಿಸುತ್ತದೆ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿರುವ ಅನೇಕ ಲೋಪದೋಷಗಳಾದ ಲಂಚಗುಳಿತನ, ಪರೀಕ್ಷೆಯಲ್ಲಿ ನಡೆಯುವ ಅವ್ಯವಹಾರಗಳು ಇದಕ್ಕೆ ಮುಖ್ಯ ಕಾರಣವಾಗಿದೆ. ಹಿಂದಿನ ಕಾಲದಲ್ಲಿ ಗುರುಕುಲ ವಿದ್ಯಾಭ್ಯಾಸ ನಡೆಸುತ್ತಿದ್ದ ಸಂದರ್ಭದಲ್ಲಿ ಅಂದಿನ ಉತ್ತಮ ವಾತಾವರಣ ಹಾಗೂ ಗುರುಶಿಷ್ಯರ ನಡುವಿನ ಉತ್ತಮ ಸಂಬಂಧ ಉತ್ತಮ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಾಯಕವಾಗಿದ್ದವು. ಗುರುಕುಲಗಳು ದೇವಾಲಯದಂತಿರುತ್ತಿದ್ದವು. ಆದರೆ ಇಂದಿನ ದಿನಗಳಲ್ಲಿ ಶಾಲಾ-ಕಾಲೇಜುಗಳು ವಿದ್ಯಾರ್ಥಿಗಳಿಗೆ ತಮ್ಮ ಸಮಯ ಕಳೆಯಲು ಬರುವ ಒಂದು ಮೋಜಿನ ಸ್ಥಳವಾಗಿದೆ. ಶಿಕ್ಷಕರಿಗೆ ಗೌರವ ಕೊಡುವ ಬದಲು ಅವಹೇಳನ ಮಾಡುತ್ತಾರೆ. ಈ ಎಲ್ಲಾ ಕಾರಣಗಳಿಂದಾಗಿ ಇಂದಿನ ವಿದ್ಯಾರ್ಥಿಗಳು ಶಿಕ್ಷಣದಿಂದ ತಮ್ಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವುದು ಒಂದು ವಿಪರ್ಯಾಸದ ಸಂಗತಿಯಾಗಿದೆ.

**—ರೇಣುಕ ಎಂ.ಜಿ., ಪ್ರಥಮ ಬಿ.ಎ.**
**ಜೆ.ಎಸ್.ಎಸ್ ಮಹಿಳಾ ಕಾಲೇಜು, ಸರಸ್ವತಿಪುರಂ, ಮೈಸೂರು.**

ಪ್ರಜೆಗಳನ್ನು ಆಳುವ ಕಲೆಯನ್ನು ಕುರಿತು ಆಳವಾಗಿ ಚಿಂತಿಸುವವರೆಲ್ಲರೂ ರಾಜ್ಯದ ಅದೃಷ್ಟವು ಯುವಕರ ಶಿಕ್ಷಣವನ್ನು ಅವಲಂಬಿಸಿದೆ ಎಂದು ದೃಢವಾಗಿ ನಂಬುತ್ತಾರೆ.

—ಅರಿಸ್ಟಾಟಲ್

**ಪ್ರಾಥಮಿಕ,** ಪ್ರೌಢ, ಉನ್ನತ, ಅತ್ಯುನ್ನತ ಶಿಕ್ಷಣದಿಂದ ವ್ಯಕ್ತಿಯ ವಿಕಾಸ ಉಂಟಾಗಿ, ಅವನ ಅಭಿರುಚಿಗೆ ತಕ್ಕಂತೆ ಶಿಕ್ಷಣದಿಂದ ಉಪಯೋಗ ಪಡೆದು, ಮುಂದಿನ ಜೀವನಕ್ಕೆ, ಸಮಾಜಕ್ಕೆ ಹಾಗೂ ರಾಷ್ಟ್ರಕ್ಕೆ ವಿಧೇಯನಾಗಿ ನಡೆಯುವಂತೆ ಮಾಡಬೇಕಾಗಿರುವುದರಿಂದ ವ್ಯಕ್ತಿಗೂ ಶಿಕ್ಷಣಕ್ಕೂ ಸಂಬಂಧವಿದೆ. ಈ ರೀತಿ ಸಂಬಂಧವಿರುವುದರಿಂದ ವ್ಯಕ್ತಿಯು ಕುಟುಂಬ, ಸಮಾಜ ಹಾಗೂ ಗ್ರಾಮ, ರಾಜ್ಯ ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಿ ಪ್ರಜಾಪ್ರಭುತ್ವದ ರಾಷ್ಟ್ರಕ್ಕೆ ನೆರವಾಗುವನು. ಶಿಕ್ಷಣವು ಒಬ್ಬ ವ್ಯಕ್ತಿಯನ್ನು ಒಬ್ಬ ಸತ್ಪ್ರಜೆಯನ್ನಾಗಿ ಮಾಡಬಲ್ಲದು.

**—ಜಿ.ಎಸ್. ನಾಗಲಕ್ಷ್ಮಿ, ದ್ವಿತೀಯ ಬಿ.ಎಸ್ಸಿ.,**
**ಮಹಾರಾಣಿ ಮಹಿಳಾ ವಿಜ್ಞಾನ ಕಾಲೇಜು, ಮೈಸೂರು.**

**ವ್ಯಕ್ತಿತ್ವ** ನಿರ್ಮಾಣವಾಗಬೇಕಾದರೆ ಶಿಕ್ಷಣದ ಪಾತ್ರ ಅತ್ಯುತ್ತಮವಾದುದು. ಏಕೆಂದರೆ ವ್ಯಕ್ತಿತ್ವ ನಿರ್ಮಾಣಕ್ಕೆ ದಾರಿಮಾಡಿಕೊಡುವುದೇ ಶಿಕ್ಷಣದ ಉದ್ದೇಶವಾಗಿರುತ್ತದೆ. ಅಲ್ಲದೆ ವ್ಯಕ್ತಿಯ ಸರ್ವಾಂಗೀಣ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತದೆ. ಶಿಕ್ಷಣದಿಂದ ವ್ಯಕ್ತಿಯಲ್ಲಿ ಆತ್ಮವಿಶ್ವಾಸ ಹೆಚ್ಚುತ್ತದೆ; ಪ್ರತಿಭೆ ಅರಳುತ್ತದೆ; ಕೌಶಲ್ಯ ವೃದ್ಧಿಯಾಗುತ್ತದೆ; ತಾನೇ ಸ್ವತಃ ದುಡಿಯಬೇಕೆಂಬ

## ಆತ್ಮನಿಗ್ರಹವನ್ನು ಬೋಧಿಸುವ ಕೆಟ್ಟ ಶಿಕ್ಷಣವು ಅದನ್ನು ಕಡೆಗಣಿಸುವ ಅತ್ಯುತ್ತಮ ಶಿಕ್ಷಣಕ್ಕಿಂತ ಉತ್ತಮ. —*ಅನಾಮಿಕ*

ಮತ್ತು ಇನ್ನೊಬ್ಬರಿಗೆ ಒಳ್ಳೆಯದನ್ನು ಮಾಡಬೇಕೆಂಬ ಬಯಕೆ ಹುಟ್ಟುತ್ತದೆ. ಇದರಿಂದ ವ್ಯಕ್ತಿಯ ಸ್ಥಾನಮಾನ ಹೆಚ್ಚುವುದೇ ಅಲ್ಲದೆ ವ್ಯಕ್ತಿಯು ನೈತಿಕತೆ, ಆಧ್ಯಾತ್ಮಿಕತೆಯನ್ನು ಅಳವಡಿಸಿಕೊಳ್ಳಲು ಪ್ರೇರೇಪಣೆ ಸಿಗುತ್ತದೆ. ವ್ಯಕ್ತಿ ಸಂತೋಷದಿಂದ ಜೀವನ ನಡೆಸಲು ಮತ್ತು ನಲಿವು ಗೆಲುವುಗಳಿಂದ ಬದುಕುವಂತೆ ಮಾಡುವುದೇ ಅಲ್ಲದೆ ಪ್ರಪಂಚ ಜ್ಞಾನವನ್ನು ಅರಿಯುವಂತೆ ಮಾಡುತ್ತದೆ.

ಇಂತಹ ಶಿಕ್ಷಣವಿಲ್ಲದಿದ್ದರೆ ವ್ಯಕ್ತಿಯಲ್ಲಿ ಅಜ್ಞಾನ, ಆಲಸ್ಯ, ಅಹಂಕಾರಗಳೆಂಬ ದುಷ್ಟ ಚಟಗಳು ಮನೆಮಾಡುತ್ತವೆ. ಉತ್ತಮ ಶಿಕ್ಷಣದಿಂದ ವ್ಯಕ್ತಿಯು ಉದ್ಯಮಶೀಲನಾಗುತ್ತಾನೆ, ಸಾಹಸ-ಸಾಧನೆಗಳನ್ನು ಸಾಧಿಸುವುದರಲ್ಲಿ ಯಶಸ್ವಿಯಾಗುತ್ತಾನೆ.

—ಜಯ ಸುಂದರಿ, ದ್ವಿತೀಯ ಬಿ.ಎ.,
ಮಲ್ಲಮ್ಮ ಮರಿಮಲ್ಲಪ್ಪ ಕಲಾ ಮತ್ತು ವಾಣಿಜ್ಯ ಕಾಲೇಜು,
ಮೈಸೂರು.

**ಶಿಕ್ಷಣಕ್ಕೂ** ವ್ಯಕ್ತಿತ್ವ ನಿರ್ಮಾಣಕ್ಕೂ ನೇರ ಸಂಬಂಧವಿದೆ. ವ್ಯಕ್ತಿತ್ವ ನಿರ್ಮಾಣ ಶಿಕ್ಷಣದ ಒಂದು ಅಂಗ. ಶಿಕ್ಷಣ ಪದ್ಧತಿಯಲ್ಲಿ ವ್ಯಕ್ತಿತ್ವ ನಿರ್ಮಾಣದಂತಹ ಉಪಯುಕ್ತ ಕಾರ್ಯಗಳಿಗಾಗಿ ಸಮಯವನ್ನು ಮೀಸಲಿಡಬೇಕು. ವ್ಯಕ್ತಿತ್ವ ನಿರ್ಮಾಣ ಶಿಬಿರ, ಉಪನ್ಯಾಸ ಮುಂತಾದವುಗಳಿಗೂ ಶಿಕ್ಷಣದಲ್ಲಿ ಪ್ರಾಶಸ್ತ್ಯ ಕೊಡಬೇಕು. ವಿದ್ಯಾರ್ಥಿಗಳು ತಪ್ಪು ದಾರಿ ಹಿಡಿದಿದ್ದರೆ, ಅವರಿಗೆ ಅವರು ಮಾಡುತ್ತಿರುವ ತಪ್ಪನ್ನು ತಿಳಿಸಿ ಸರಿಯಾದ ದಾರಿಯಲ್ಲಿ ಕರೆದೊಯ್ಯಬೇಕು. ವಿದ್ಯಾರ್ಥಿಗಳ ಲೋಪದೋಷಗಳನ್ನು ಸರಿಪಡಿಸಬೇಕು. ವಿದ್ಯಾರ್ಥಿಗಳಲ್ಲಿ ಸಾಮಾನ್ಯವಾಗಿ ನೆಲೆಸಿರುವ ಅಹಂಕಾರ, ಹೊಟ್ಟೆಕಿಚ್ಚು ಮುಂತಾದವುಗಳಿಂದ ಆದಷ್ಟು ಅವರನ್ನು ಮುಕ್ತಗೊಳಿಸಬೇಕು. ವಿದ್ಯಾರ್ಥಿಗಳ ಕೆಟ್ಟ ಹವ್ಯಾಸಗಳನ್ನು ಚಿಗುರಿನಲ್ಲಿಯೇ ಚಿವುಟುವುದರ ಮೂಲಕ ಅವರ ವ್ಯಕ್ತಿತ್ವ ನಿರ್ಮಾಣಕ್ಕೆ ಸಹಾಯ ಮಾಡಬೇಕು.

—ಭವ್ಯ. ಹೆಚ್. ಎಸ್, ದ್ವಿತೀಯ ಪಿ.ಯು.ಸಿ ,
ಜೆ.ಎಸ್.ಎಸ್ ಮಹಿಳಾ ಕಾಲೇಜು, ಮೈಸೂರು.

## ನಿನ್ನ ಕೈಯ್ಯಲ್ಲೇ ಇದೆ

ಒಬ್ಬ ಹುಡುಗ ತನ್ನ ತಾಯಿಯನ್ನು ಕೇಳಿದ, 'ಅಮ್ಮಾ, ಆ ಬೆಟ್ಟದ ಮೇಲೆ ಕಣ್ಣು ಮುಚ್ಚಿ ಕುಳಿತಿದ್ದಾನಲ್ಲ ಆ ಮುದುಕ ಯಾರಮ್ಮಾ?'

'ಮುದುಕ ಎಂದು ಕರೆಯಬಾರದಪ್ಪಾ, ಅದು ಬುದ್ಧ'

'ಬುದ್ಧ ಎಂದರೆ ಯಾರು?'

'ಬುದ್ಧ ಎಲ್ಲವನ್ನೂ ತಿಳಿದವನು, ಜ್ಞಾನಿ.'

'ಅವನಿಗೆ ಎಲ್ಲ ತಿಳಿದಿದೆಯೆ? ನಮ್ಮ ಗಣಿತ, ಚರಿತ್ರೆ ಇದರಲ್ಲೆಲ್ಲ ಬರುವ ಪ್ರಶ್ನೆಗಳಿಗೆಲ್ಲ ಉತ್ತರ ತಿಳಿದಿದೆಯೆ?'

'ಬುದ್ಧನಿಗೆ ಎಲ್ಲ ತಿಳಿದಿದೆ. ತಿಳಿಯದೆ ಇರುವುದು ಯಾವುದೂ ಇಲ್ಲ.'

'ನಾನು ಒಂದು ಪ್ರಶ್ನೆ ಕೇಳುತ್ತೇನೆ. ಅದಕ್ಕೆ ಉತ್ತರ ಬುದ್ಧನಿಗೂ ತಿಳಿಯುವುದಿಲ್ಲ. ನಾನು ಒಂದು ಚಿಟ್ಟೆಯನ್ನು ಹಿಡಿಯುತ್ತೇನೆ. ಅದನ್ನು ಮುಷ್ಟಿಯಲ್ಲಿ ಹಿಡಿದು ಇದು ಬದುಕಿದೆಯೋ, ಸತ್ತಿದೆಯೋ ಎಂದು ಕೇಳುತ್ತೇನೆ. ಬುದ್ಧ ಅದು ಬದುಕಿದೆ ಎಂದರೆ ಸಾಯಿಸಿಬಿಟ್ಟು ತೋರಿಸುತ್ತೇನೆ. ಸತ್ತಿದೆ ಎಂದು ಹೇಳಿದರೆ ಅದನ್ನು ಬಿಟ್ಟುಬಿಡುತ್ತೇನೆ, ಅದು ಹಾರಿಹೋಗುತ್ತದೆ.'

ಹುಡುಗ ಬೆಟ್ಟದ ಮೇಲಕ್ಕೆ ಓಡಿಹೋದ. ಒಂದು ಚಿಟ್ಟೆಯನ್ನು ಹಿಡಿದ, ಮುಷ್ಟಿಯಲ್ಲಿರಿಸಿಕೊಂಡ. ಬುದ್ಧನನ್ನು ಧ್ಯಾನದಿಂದ ಎಚ್ಚರಿಸಿದ. 'ನನ್ನ ಮುಷ್ಟಿಯಲ್ಲಿರುವ ಚಿಟ್ಟೆ ಬದುಕಿದೆಯೋ ಸತ್ತಿದೆಯೋ ಹೇಳು!' ಎಂದು ಕೇಳಿದ.

ಬುದ್ಧ ನಗುತ್ತಾ ಹೇಳಿದ, 'ಮಗೂ, ಉತ್ತರ ನಿನ್ನ ಕೈಯ್ಯಲ್ಲೇ ಇದೆ !'

ಹಾಗೆಯೇ ನಮ್ಮ ವ್ಯಕ್ತಿತ್ವ ನಿರ್ಮಾಣ ನಮ್ಮ ಕೈಯಲ್ಲೇ ಇದೆ.

ಸಂಗ್ರಹ : ಪ್ರೊ. ಎನ್. ಕೃಷ್ಣಸ್ವಾಮಿ